**ಓ.ಎಸ್. ನಂ. 120/2017 ಡಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 27.7.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಹೆಚ್.ಎಂ ವಕೀಲರಿಂದಃ**

ದಾವ 2 ನೇ ಐಟಂ ಆಸ್ತಿಯನ್ನು ನನ್ನ ತಂದೆ ಖರೀದಿಸುವ ಪೂರ್ವದಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಏನು ವ್ಯವಹಾರವಾಗಿರುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ. ಅದನ್ನು ನನ್ನ ತಂದೆ ಎರಡುವರೆ ಸಾವಿರ ರೂಪಾಯಿಗೆ ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯು ಮೂಲತಃ ಸಿದ್ದಚಾರಿ ಹೆಂಡತಿ ಲಿಂಗಮ್ಮ ಮತ್ತು ಮಗ ಪುಟ್ಟಸೋಮಚಾರಿ ರವರ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ದಿನಾಂಕ 23.5.1966 ರಂದು ವಾದಿಯರ ತಂದೆ ಕರಿಯಪ್ಪ ರವರಿಗೆ ನಿಡಿ33 ರಲ್ಲಿ ನಮೂದಿಸಿರುವ ಒಕ್ಕಣೆಗಳ ಪ್ರಕಾರ 500/- ರೂ.ಗಳಿಗೆ ನೋಂದಾಯಿತ ಬೋಗ್ಯವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಗೆ ಆಗಿರುವ ಕ್ರಯಪತ್ರದಲ್ಲಿ ಒಟ್ಟು ಕುಟುಂಬದಲ್ಲಿದ್ದ ಕಾರಣ ಖರೀದಿಸಿದ ಮೌಲ್ಯ 2000/- ರೂ. ಪೈಕಿ 500/- ರೂ.ಗಳನ್ನು ಸದರಿ ಬೋಗ್ಯಕ್ಕೆ ಹಿಡಿದುಕೊಳ್ಳಬೇಕೆಂದು ನಿಡಿ33 ರಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಬೋಗ್ಯಪತ್ರದ ಬಿಡುಗಡೆ ಪತ್ರವಾಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಒಟ್ಟು ಕುಟುಂಬದಲ್ಲಿದ್ದಾಗ ಒಟ್ಟು ಕುಟುಂಬದ ಆದಾಯದಲ್ಲಿ ಸದರಿ ಆಸ್ತಿಯನ್ನು ಖರೀದಿಸಿದ್ದು ಆ ಕಾರಣ ದಾವ 2 ನೇ ಐಟಂ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಆ ಕಾರಣ ವಾದಿಗೂ ಸಹ ಸದರಿ ಆಸ್ತಿಯಲ್ಲಿ ಸಮನಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ21 ರಿಂದ ನಿಡಿ23 ದಾಖಲೆಗಳಲ್ಲಿ ಪಿತ್ರಾರ್ಜಿತ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿದಾರರು ಮರಯ್ಯ ಮತ್ತು ಕುಂಟಮರಯ್ಯ ನವರಿಗೆ ಪಿತ್ರಾರ್ಜಿತ ಆಸ್ತಿಯಾಗಿದ್ದು ಅವರಿಂದ ನಿಂಗಮ್ಮ ಪುಟ್ಟಸೋಮಚಾರ್ ರವರಿಗೆ ಸದರಿ ಆಸ್ತಿಯು ಬಂದಿದ್ದು, ನಂತರ ನನ್ನ ತಂದೆ ಖರೀದಿ ಮಾಡಿರುವುದರಿಂದ ಅವರಿಗೆ ಸ್ವಯಾರ್ಜಿತ ಆಸ್ತಿ ಎನ್ನುವರು. ನಿಡಿ21 ರಿಂದ 23 ಪಹಣಿಗಳಲ್ಲಿ ಕರಿಯಪ್ಪ, ಬಸಪ್ಪ, ನಂಜಪ್ಪ ಮತ್ತು ಚಿಕ್ಕತಾಯಮ್ಮ ಎಂದು ಜಂಟಿ ಹೆಸರಿನಲ್ಲಿ ಸದರಿ ಆಸ್ತಿಯು ಇರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ26 ಮತ್ತು 27 ದಾಖಲೆಯಲ್ಲಿ ಪಿತ್ರಾರ್ಜಿತ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ28 ದಾಖಲೆಯು ಸರ್ವೆ ನಕಾಶೆಯಾಗಿದ್ದು ಅದು 1981-82 ರಲ್ಲಿ ಆಗಿರುತ್ತದೆ. ಸದರಿ ನಕಾಶೆಯನ್ನು ಈ ದಾವೆ ತನಿಖೆಗೆ ಬಾಕಿ ಇರುವಾಗ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಆಸ್ತಿಗಳನ್ನು ಹೊರತುಪಡಿಸಿ ವಾದಿ ಮತ್ತು ಪ್ರತಿವಾದಿಯರಿಗೆ ಬೇರೆ ಆಸ್ತಿ ಇರುತ್ತದಾ ಎಂದರೆ ಸಾಕ್ಷಿದಾರರು 2 ರಿಂದ 6 ನೇ ಪ್ರತಿವಾದಿಯರ ತಂದೆ ನಂಜಪ್ಪರ ಹೆಸರಿನಲ್ಲಿ ಕೋಹಳ ಗ್ರಾಮದ ಸರ್ವೆ ನಂಬರ್ 5/5 ರಲ್ಲಿ 2-20 ಎಕರೆ ಆಸ್ತಿ ಇರುತ್ತದೆ ಎನ್ನುವರು. ಸದರಿ ಆಸ್ತಿಯನ್ನು ನಂಜಪ್ಪ ರವರು 1978 ರಲ್ಲಿ ಖರೀದಿಸಿದ್ದು ಅದು ಅವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಅದರ ಪೈಕಿ 20 ಗುಂಟೆ ಆಸ್ತಿಯನ್ನು 1979 ರಲ್ಲಿ ಕೆಂಚಯ್ಯ ರವರಿಗೆ ಮಾರಾಟ ಮಾಡಿರುತ್ತಾರೆ, ನಂತರವೂ ಸಹ

ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ವಿಚಾರವನ್ನು ನನ್ನ ತಕರಾರಿನಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನನ್ನ ತಕರಾರಿನಲ್ಲಿ ಹೇಳಿರುವುದಿಲ್ಲ ಮತ್ತು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.